ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ ರವರು ಮಂಡಿಸಿರುವ ನಿಯಮ 72 ರಡಿಯಲ್ಲಿ ಸೂಚನಾ ಪತ್ರಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

"ರಾಜ್ಯದಲ್ಲಿ ಇತ್ತೀಚೆಗೆ ಅಸಂಖ್ಯಾತ ಜನರು ಸೈಬರ್ ಮೂಲಕ ಹಣ ಕಳವು ಮತ್ತು ವಂಚನೆಗೆ ಒಳಗಾಗುತ್ತಿದ್ದಾರೆ. ವಂಚನೆಗೆ ಒಳಗಾದ ಜನರ ಪೈಕಿ ವೃದ್ಧರು ಹಾಗೂ ಅವಿದ್ಯಾವಂತರೇ ಹೆಚ್ಚು, ಸರ್ಕಾರವು ಜನರನ್ನು ಆಧುನಿಕ ಇ-ಬ್ಯಾಂಕಿಂಗ್ ವ್ಯವಸ್ಥೆಯ ಬಳಕೆಯನ್ನು ಜಾರಿಗೆ ತಂದಿರುವಾಗ ಆ ಮುಗ್ಧ ಜನರು ಕಷ್ಟಪಟ್ಟು ದುಡಿದಂತಹ ಹಣವನ್ನು ಕಾಪಾಡುವ ಜವಾಬ್ದಾರಿ ಸರ್ಕಾರದೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಈವರೆವಿಗೂ ದಾಖಲಾದ ಪ್ರಕರಣಗಳ ಕುರಿತು ಪತ್ತೆಗೆ ತೆಗೆದುಕೊಂಡಿರುವ ಕ್ರಮಗಳು ಹಾಗೂ ಇಂತಹ ವಂಚನೆ/ಕಳವು ಪ್ರಕರಣಗಳನ್ನು ತಡೆಯಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ "

**ಸರ್ಕಾರದ ಹೇಳಿಕೆ**

**ರಾಜ್ಯದಲ್ಲಿ ಸೈಬರ್ ಅಪರಾಧಗಳು ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾದ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ.**

| ವರ್ಷ | ವರದಿ | ಪತ್ತೆ | ನಾಪತ್ತೆ | ತನಿಖೆ |
|---|---|---|---|---|
| 2017 | 3180 | 303 | 804 | 2073 |
| 2018 | 5805 | 195 | 103 | 5507 |
| 2019 | 9534 | 36 | 9 | 9489 |

ಸೈಬರ್ ಅಪರಾಧಗಳನ್ನು ತನಿಖೆ ನಡೆಸಲು ಹಾಗೂ ಪತ್ತೆ ಹಚ್ಚಲು ರಾಜ್ಯದ ಎಲ್ಲಾ ಜಿಲ್ಲೆ/ನಗರಗಳಲ್ಲಿ ವಿಶೇಷ ಸಿ.ಇ.ಎನ್ (Cyber, Narcotic & Economic) ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿರುತ್ತದೆ. ಈ ಪೊಲೀಸ್ ಠಾಣೆಗಳಲ್ಲಿ ಸೈಬರ್ ವಂಚನೆಗಳನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು. ಆರೋಪಿಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲು ತನಿಖಾಧಿಕಾರಿಗಳಿಗೆ ರಾಜ್ಯ ಸಿಐಡಿ ಘಟಕದಿಂದ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಸೈಬರ್ ಕಳವು ಮತ್ತು ವಂಚನೆ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಇಂತಹ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರವು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತದೆ.

- ಸೈಬರ್ ಅಪರಾಧ ಪ್ರಕರಣಗಳಿಗೆ ತುತ್ತಾಗದಂತೆ ಪಾಲಿಸಬೇಕಾದ ಸುರಕ್ಷಾ ಸಲಹೆಗಳನ್ನೊಳಗೊಂಡ ಸುಮಾರು 500 ಕ್ಕೂ ಅಧಿಕ ಸ್ಲೈಡ್‌ಗಳನ್ನು ತಯಾರಿಸಿ ಫೇಸ್‌ಬುಕ್ ಫೇಜ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಜಾಗೃತಿ ಮೂಡಿಸಲಾಗಿದೆ.
- ಆಕಾಶವಾಣಿ. ಎಫ್.ಎಮ್. 91.1. ಎಫ್.ಎಮ್ 92.5. ಮೂಲಕ ನಿರಂತರವಾಗಿ ಎರಡು ತಿಂಗಳ ಅವಧಿಯ ಕಾರ್ಯಕ್ರಮವನ್ನು ಸೈಬರ್ ಅಪರಾಧ ತಡೆ ಬಗ್ಗೆ ತಯಾರಿಸಿ ಪ್ರಸಾರ ಮಾಡಿಸಿ ಜಾಗೃತಿ ಮೂಡಿಸಲಾಗಿದೆ.
- ವಿವಿಧ ಪ್ರಮುಖ ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವ 20 ಕ್ಕೂ ಅಧಿಕ ವಿಡಿಯೋ ತುಣುಕುಗಳನ್ನು ತಯಾರಿಸಿ ಫೇಸ್‌ಬುಕ್. ವಾಟ್ಸ್‌ಆಫ್‌ಗಳಲ್ಲಿ ಪೋಸ್ಟ್ ಮಾಡುವ ಮೂಲಕ ಪ್ರಚಾರಪಡಿಸಿ ಜಾಗೃತಿ ಮೂಡಿಸಲಾಗಿದೆ.

---

ಸಂಖ್ಯೆ: ಇ- ಒಇ 08 ಪಿಸಿಕ್ಯೂ 2019

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು